<u>ದಿನಾಂಕಃ 22-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ- ಪ್ರತಿವಾದಿಯರ ಪರ ವಕೀಲರಿಂದಃ-</u>

ಷಡಾಕ್ಷರಿರವರು ಮುಗುಳುವಳ್ಳಿ ಕೆನರಾ ಬ್ಯಾಂಕಿನಲ್ಲಿ ತೆರೆಯುವ ಸಮಯದಲ್ಲಿ ಮಂಜುಳರವರನ್ನು ನಾಮಿನಿಯಾಗಿ ಮಾಡಿದಂತಹ ದಾಖಲೆ ಎಂದು ಸಾಕ್ಷಿದಾರರಿಗೆ ಒಂದು ದಾಖಲೆ ತೋರಿಸಲಾಗಿ ಸಾಕ್ಷಿದಾರರು ಅಲ್ಲಗಳೆದಿರುತ್ತಾರೆ. ಷಡಾಕ್ಷರಿರವರು ನನ್ನನ್ನು ಮುಗುಳವಳ್ಳಿ ಬ್ಯಾಂಕಿನ ಖಾತೆಯಲ್ಲಿ ನಾಮೀನಿಯನ್ನಾಗಿ ಮಾಡಿರುತ್ತಾರೆ. ಸಾಕ್ಷಿದಾರರು ಮುಂದುವರಿದು ನುಡಿಯುತ್ತಾರೆ ನನ್ನನ್ನು ನಾಮಿನಿಯನ್ನಾಗಿ ಮಾಡಿರುವುದಿಲ್ಲ. ಆದರೆ, ಖಾತೆಯನ್ನು ತೆರೆದಿರುತ್ತಾರೆ. ಮುಗುಳವಳ್ಳಿಯಲ್ಲಿ ಕರ್ನಾಟಕ ಗ್ರಾಮೀಣ ಬ್ಯಾಂಕ್ ಇರುತ್ತದೆ ಎಂದರೆ ಸರಿ. ಷಡಾಕ್ಷರಿರವರು ಮೃತಪಟ್ಟ ನಂತರ 1 ರಿಂದ 3 ನೇ ಪ್ರತಿವಾದಿಯರು ಅವರ ವಾರಸುದಾರರಾಗಿದ್ದುದರಿಂದ ಸಾಲವನ್ನು 2022 ರಲ್ಲಿ ತೀರುವಳಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಷಡಾಕ್ಷರಿರವರು ಬ್ಯಾಂಕಿನಲ್ಲಿ ಸಾಲ ಮಾಡಿರುವುದಿಲ್ಲ. ಷಡಾಕ್ಷರಿರವರು ಸಾಲ ಹೆಚ್ಚಾಗಿ ಆತ್ಮಹತ್ಯೆ ಮಾಡಿಕೊಂಡಿದ್ದು ಅದನ್ನು ರೈತರ ಆತ್ಮಹತ್ಯೆ ಎಂದು ತೋರಿಸಲಾಗಿರುತ್ತದೆ ಎಂದರೆ ಸಾಕ್ಷಿದಾರರು ಗ್ರಾಮಸ್ಥರು ಅವರ ಆತ್ಮಹತ್ಯೆಯನ್ನು ರೈತರ ಆತ್ಮಹತ್ಯೆ ಎಂದು ತೋರಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಷಡಾಕ್ಷರಿರವರ ಮರಣದ ಬಗ್ಗೆ ರೈತರ ಆತ್ಮಹತ್ಯೆ ಅಲ್ಲ ಎಂದು ಜಿಲ್ಲಾಧಿಕಾರಿಯವರಿಗೆ ಮನವಿಯನ್ನು ಸಲ್ಲಿಸಿರುವುದಿಲ್ಲ. ಕೃಷಿ ಇಲಾಖೆಗೆ ಮನವಿಯನ್ನು ಸಲ್ಲಿಸಿರುತ್ತೇನೆ. ನಾನು ಕೃಷಿ ಇಲಾಖೆಯಲ್ಲಿ

ಷಡಾಕ್ಷರಿರವರು ಮೃತಪಟ್ಟಾಗ ರೈತರ ಆತ್ಮಹತ್ಯೆ ಎಂದು ತಿಳಿಸಿದಾಗ ಆ ಬಗ್ಗೆ ಬರಬೇಕಾದ ಹಣದಲ್ಲಿ ನನಗೂ ಕೂಡಾ ಪಾಲು ಬರಬೇಕು ಎಂದು ಕೇಳಿರುತ್ತೇನೆ. ಷಡಾಕ್ಷರಿರವರ ಸಾವು ಅಸಹಜ ಸಾವು, ರೈತರ ಆತ್ಮಹತ್ಯೆ ಅಲ್ಲ ಎಂದು ಕೃಷಿ ಇಲಾಖೆಗೆ ಮನವಿಯನ್ನು ನೀಡಿರುವುದಿಲ್ಲ. ಷಡಾಕ್ಷರಿರವರು ಮೃತಪಟ್ಟ ನಂತರ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ಸ್ಥಳಕ್ಕೆ ಬಂದು ತನಿಖೆಯನ್ನು ನಡೆಸಿ ಷಡಾಕ್ಷರಿರವರು ಸಾಲದಿಂದಾಗಿ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ ಎನ್ನುವುದನ್ನು ಖಚಿತಪಡಿಸಿಕೊಂಡು ನಂತರ ಸರ್ಕಾರದಿಂದ ಹಣವನ್ನು ಮಂಜೂರು ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಸರ್ಕಾರದಿಂದ 5 ಲಕ್ಷ ಹಣ ಮಂಜೂರಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕೃಷಿ ಇಲಾಖೆಯಲ್ಲಿ ಷಡಾಕ್ಷರಿರವರಿಗೆ ರೈತರ ಆತ್ಮಹತ್ಯೆ ಎನ್ನುವ ಕಾರಣಕ್ಕೆ 5 ಲಕ್ಷ ಹಣ ಮಂಜೂರಾಗಿತ್ತೋ ಇಲ್ಲವೋ ಎಂಬ ಬಗ್ಗೆ ನಾನು ಕೇಳಿ ತಿಳಿದುಕೊಂಡಿರುವುದಿಲ್ಲ. ಸದರಿ 5 ಲಕ್ಷ ಹಣ ಬಂದಿದೆ ಎಂದು ಹೇಳಿರುವ ಕಾರಣ ನಾನು ಆ ಹಣವನ್ನೂ ಕೂಡಾ ಈ ದಾವೆಯಲ್ಲಿ ಸೇರಿಸಿರುತ್ತೇನೆ.

ಪ್ರತಿವಾದಿಯರಿಗೆ ನೀಡುವ ನೋಟೀಸ್ ನ ಬಗ್ಗೆ ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಆ ಸಮಯದಲ್ಲಿ ಷಡಾಕ್ಷರಿಯವರು ಸಾಲವನ್ನು ತೀರಿಸಲಾಗದೇ ವಿಷ ಸೇವಿಸಿ ಮೃತಪಟ್ಟಿರುತ್ತಾರೆ ಎಂದು ತಿಳಿಸಿರುವುದಿಲ್ಲ. ನಿಪಿ-13 ರಲ್ಲಿ ಈ ಬಗ್ಗೆ ನಾನು ತಿಳಿಸಿರುವುದಿಲ್ಲ. ನೋಟೀಸ್ ನೀಡುವ ಪೂರ್ವದಲ್ಲಿ ಸದರಿ ನೋಟೀಸ್ ನಲ್ಲಿ ವಕೀಲರು ಏನೇನು ಬರೆದುಕೊಂಡಿರುತ್ತಾರೆ ಎಂದು ನಾನು ಓದಿ ತಿಳಿದುಕೊಂಡಿರುವುದಿಲ್ಲ. ಸದರಿ ನೋಟೀಸ್ ಅನ್ನು ನೀಡುವ ಪೂರ್ವದಲ್ಲಿ ವಕೀಲರಿಗೆ ನಮ್ಮ ಕುಟುಂಬದ ಬಗ್ಗೆ

ವಿಷಯವನ್ನು ತಿಳಿಸಿರುತ್ತೇನೆ. ನಾನು ತಿಳಿಸುವ ಪೂರ್ವದಲ್ಲಿ ನನ್ನ ವಕೀಲರಿಗೆ ನಮ್ಮ ಕುಟುಂಬದ ಪೂರ್ವಪರ ವಿಚಾರ ತಿಳಿದಿರಲಿಲ್ಲ. 1 ನೇ ಪ್ರತಿವಾದಿಯು ಈ ನ್ಯಾಯಾಲಯದಲ್ಲಿ ಪಿ.ಅಂಡ್ ಎಸ್.ಸಿ ಅರ್ಜಿ ಸಲ್ಲಿಸಿ ಆದೇಶ ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಹಾಗೂ ಷಡಾಕ್ಷರಿರವರ ನಡುವೆ ಯಾವ ದಿನಾಂಕದಂದು ಮದುವೆ ಆಗಿರುತ್ತದೆ ಎಂದು ಹೇಳಲು ಈಗ ನನಗೆ ನೆನಪಿರುವುದಿಲ್ಲ. ಸಾಕ್ಷಿದಾರರಿಗೆ ಒಂದು  ಡಿಮ್ಯಾಂಡ್ ರಿಜಿಸ್ಟರ್ ನ ದೃಢೀಕೃತ ಪ್ರತಿಯನ್ನು ತೋರಿಸಿ  ಅದರಲ್ಲಿ ತೋರಿಸಿರುವ ಮನೆಯು ಷಡಾಕ್ಷರಿರವರ ಹೆಸರಿನಲ್ಲಿ ಇತ್ತು ಎಂದು ಕೇಳಲಾಗಿ ಸಾಕ್ಷಿದಾರರು ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ಮನೆಯೂ ಈಗಲೂ ಕೂಡಾ ಷಡಾಕ್ಷರಿರವರ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿದಾರರು ಷಡಾಕ್ಷರಿರವರ ಹೆಸರಿನಲ್ಲಿ ಒಟ್ಟು 3 ಮನೆಗಳು ಇರುತ್ತದೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ನಿಡಿ-1 ರಲ್ಲಿ ತೋರಿಸುವ ಮನೆಯು ಷಡಾಕ್ಷರಿರವರ ಹೆಸರಿನಲ್ಲಿ ಇದ್ದ ಮನೆ ಬಗ್ಗೆ ಗೊತ್ತಿತ್ತು ಎಂದರೆ ಸರಿ. ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ಸದರಿ ನಿಡಿ-1 ರಲ್ಲಿ ತೋರಿಸಿರುವ ಮನೆಯ ಬಗ್ಗೆ ದಾವಾ ಆಸ್ತಿಯಲ್ಲಿ ತೋರಿಸಲು ತೊಂದರೆ ಇರಲಿಲ್ಲ. ಸದರಿ ಮನೆಯು ಮುಖ್ಯ ರಸ್ತೆಗೆ ಹತ್ತಿರವಿದ್ದಂತಹ ಮನೆ ಎಂದರೆ ಸರಿ. ಸದರಿ ಮನೆಯು ತುಂಬಾ ಬೆಲೆ ಬಾಳುವಂತಹ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ಉದ್ದೇಶಪೂರ್ವಕವಾಗಿ ಸೇರಿಸಿಲ್ಲ ಎಂದರೆ ಸರಿಯಲ್ಲ.

ಷಡಾಕ್ಷರಿಯವರು ಮರಣಾ ನಂತರ ನಾನಾಗಲೀ, 2 ನೇ ವಾದಿಯಾಗಲೀ ಅವರ ಬಾಬ್ತು ಯಾವುದೇ ಸಾಲ ತೀರಿಸಿರುವುದಿಲ್ಲ. ಸಾಕ್ಷಿದಾರರು ಸ್ವತಃ ನುಡಿಯುತ್ತಾರೆ ಷಡಾಕ್ಷರಿರವರಿಗೆ ಯಾವುದೇ ಸಾಲ ಇರಲಿಲ್ಲ. 2017 ರಲ್ಲಿ ಷಡಾಕ್ಷರಿರವರು ಮೃತಪಟ್ಟಿರುತ್ತಾರೆ.

(ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಿದೆ).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ

ಓ.ಎಸ್.ನಂಃ 43/2023
ಪಿ.ಡಬ್ಲ್ಯೂಃ 1